ನಾಡಿದ್ದು—ಅಂದರೆ ತಾನು ಕೊಲೆಯಾದ ಮುಂದಿನ ದಿನ, 'ಪ್ರೆಸ್ ಮೀಟ್ ಕರೆದು, ನಿನ್ನ ಲಂಪಟತನನ ಬಯಲು ಮಾಡ್ತೀನಿ, ಅಷ್ಟೇ ಅಲ್ಲ ಪೊಲೀಸ್ ಕಂಪ್ಲೇಂಟ್ ಕೊಡ್ತೀನಿ' ಅಂತ ಅವನಿಗೆ ನೇರವಾಗಿ ಹೇಳಿದ್ದಾರೆ ಮತ್ತು ವಾಟ್ಸಾಪ್ ಮೆಸೇಜ್ ಕೂಡ ಕಳ್ಸಿದ್ದಾರೆ. ಹೆದರಿದ ದಿನೇಶ್ ಮೊದಲು ಎಮೋಷನಲ್ ಬ್ಲಾಕ್ ಮೇಲ್ ಮಾಡಿದ್ದಾನೆ. ನಿಮಗೆ ಈ ಚಿತ್ರಲೋಕದ ಬಾಗಿಲು ತೆರೆದದ್ದೇ ನಾನು, ಇಷ್ಟು ಕಟುವಾಗಿ ರಿಯಾಕ್ಟ್ ಮಾಡಬೇಡಿ ಅಂತ. ಆಮೇಲೆ ಹೆದರಿಸಿ ನೋಡಿದ್ದಾನೆ. ಫೀಲ್ಡಲ್ಲಿ ನಿಮ್ಮನ್ನ ಎಲ್ಲರೂ ಬಾಯ್ಕಾಟ್ ಮಾಡ್ತಾರೆ ಅಂತ. ಅಮ್ಮು ಇದ್ಯಾವುದಕ್ಕೂ ಕೇರ್ ಮಾಡದೇ ಇದ್ದಾಗ, ನೀವು ಹಾಗೆ ಮಾಡಿದರೆ ನನ್ನ ಜೀವನಾನೇ ಮುಗಿದೋಗುತ್ತೇ ಅಂತ ಕೈಗೆ ಕಾಲ್ಗೇ ಬಿದ್ದು ಗೋಳಾಡಿದ್ದಾನೆ. ಆಗಲೂ ಅಮ್ಮು ಕೋಪ ಶಮನ ಆಗಿಲ್ಲ.

'ನಾನು ಇಲ್ಲಿ ಹೊಟ್ಟೆಪಾಡಿಗೆ ಬಂದಿಲ್ಲ, ನನ್ನ ಆತ್ಮಗೌರವದ ಬಗ್ಗೆ ಯಾವ ರಾಜೀನೂ ಮಾಡ್ಕೊಳ್ಳೊಲ್ಲ, ನಾನೇನಾದ್ರು ಹಾಗೆ ಮಾಡುದ್ರೆ ಕನ್ನಡಿಯಲ್ಲಿ ನನ್ನ ಮುಖ ನಾನೇ ನೋಡಕಾಗಲ್ಲ, ಯು ಬೆಟರ್ ಫೇಸ್ ದಿ ಕಾನ್ಸಿಕ್ವೆನ್ಸಸ್' ಅಂತ ಹೇಳಿ ಬಂದಿದ್ದಾಳೆ. ಇದಿಷ್ಟೂ ಈ ಪತ್ರದಲ್ಲಿ ಇದೆ. ಬಹುಶಃ ಸಿತಾರ ಜೊತೆ ಹಂಚಿಕೊಳ್ಳಬೇಕು ಅಂತ ಬರ್ದಿದ್ರೂ ಅನ್ಸುತ್ತೆ ಸಾರ್'.

'ಈ ಕಾಗದ ಸಿತಾರಾಗೇ ಬರೆದಿರೋದು ಅಂತ ಏನಾದರೂ...'

'ಸಾರ್ ಕಾಗದದ ಮೇಲ್ಗಡೆ, ಸಿತಾರ ವಿಷ್ ಯೂ ಹ್ಯಾಪಿ ಸೆವೆಂಟಿಫಿಫ್ತ್ ಇಂಡಿಯನ್ ಇಂಡಿಪೆಂಡೆನ್ಸ್ ಡೇ ಅಂತ ಇದೆ ಸಾರ್'.

'ವಿನಯ್, ಈ ಕಾಗದ ಅಮ್ಮೂ ಕೈಬರಹದಲ್ಲೇ ಇದೆಯಾ?'

'ಹೌದು ಸಾರ್... ಬೇರೆ ಬೇರೆ ಕಡೆಯಿಂದ ಅವರ ಹ್ಯಾಂಡ್ ರೈಟಿಂಗ್ ತೆಗೆದು ಹೋಲಿಕೆ ಮಾಡಿ ನೋಡಿದ್ದೀನಿ ಸಾರ್'.

'ಅಮ್ಮು ಅವರು, ಅವನಿಗೆ ಹೇಳಿದ ಹಾಗೆ ಮುಂದುವರಿದು, ಅವರು ಕೊಲೆಯಾದ ಮುಂದಿನ ದಿನ ಪ್ರೆಸ್ ಮೀಟ್ ಕರೆದು ಇವನನ್ನ ಬೆತ್ತಲೆ ಮಾಡಿ, ಪೊಲೀಸ್ ಕಂಪ್ಲೇಂಟ್ ಕೊಟ್ಟಿದ್ದರೆ ಡೈರೆಕ್ಟರ್ ದಿನೇಶನ ಕತೆ ಮುಗಿದೇ ಹೋಗ್ತಿತ್ತಲ್ಲಾ ವಿನಯ್?'

'ಸಾರ್ ಇನ್ನೊಂದಿದೆ, ಅಗ್ನಿಜಾಲ ಸೀರಿಯಲ್‌ಗೆ ಈತ ಡೈರೆಕ್ಟರ್ ಅಷ್ಟೇ ಅಲ್ಲ, ಪ್ರೊಡ್ಯೂಸರ್ ಕೂಡ... ಆ ಸೀರಿಯಲ್‌ನ ಮುಖ್ಯ ಪಾತ್ರ ಆಗಿರೋ ಅಮ್ಮು, ಆ ಸೀರಿಯಲ್‌ನಿಂದ, ಈ ರೀತೀಲಿ ಹೊರಬಿದ್ದಿದ್ದರೆ, ಅವನ ಪ್ರೊಡಕ್ಷನ್ ಟೀಮ್‌ಗೆ ಪರದೆ ಬಿದ್ದಂಗೇ ಆಗ್ತಿತ್ತು ಗೊತ್ತಾ ಸಾರ್. ಈ ಸೀರಿಯಲ್‌ನ ಪ್ರೊಮೋಷನ್ ಟ್ಯಾಗ್‌ಲೈನ್ ಮತ್ತು ಕಥಾವಸ್ತು — 'ನಿಷ್ಕರುಣೆಗಳ ನಡುವೆ ಒಬ್ಬಂಟಿ ಹೆಣ್ಣಿನ ಧೀರ ಹೋರಾಟ'.

'ಹೌದು ವಿನಯ್, ಇಟ್ ವುಡ್ ಹ್ಯಾವ್ ಬೀನ್ ಲಾಸ್ ಆಫ್ ಫೇಸ್ ಅಂಡ್ ಆಲ್ಸೋ ಕಮರ್ಷಿಯಲ್ ಡಿಸಾಸ್ಟರ್ ಫಾರ್ ಹಿಮ್. ಅಲ್ಲದೆ, ಇಡೀ ಪ್ರದರ್ಶನ ಪ್ರಪಂಚ ಇವನಿಗೆ ಬಹಿಷ್ಕಾರಾನು ಹಾಕಿರೋದೇನೋ, ತಮ್ಮ ಅಂಗಳದಲ್ಲಿ ನೈತಿಕತೆ ಎತ್ತಿಹಿಡಿಬೇಕು ಅನ್ನೋದಕ್ಕೆ ಅಲ್ಲದಿದ್ದರೂ ಒಂದು ರಕ್ಷಣಾತ್ಮಕ ನಡೆಯಾಗಿ'.

'ಅಮ್ಮು ಇದರ ಬಗ್ಗೆ, ಸಿತಾರ ಅವರ ಹತ್ತಿರ ಏನಾದರೂ ಮಾತಾಡಿದ್ದಾರ ಅಂತ ಕೇಳ್ಲಾ ಸಾರ್...?'

'ಕೇಳಿ... ಅಕಸ್ಮಾತ್ ಏನಾದ್ರು ಮಾತಾಡಿದ್ರೆ, ತನಿಖೆಯ ಈ ದಿಕ್ಕಿಗೆ ಇನ್ನಷ್ಟು ಪುಷ್ಟಿ ಸಿಗುತ್ತೆ...'

'ನೆನ್ನೆ ಸಿತಾರ ಅವರಿಗೆ ಫೋನ್ ಮಾಡ್ದಾಗ ಇನ್ನೊಂದು ಹೇಳುದ್ರು ಸಾರ್... 'ಅಮ್ಮುಗೆ ನಾನು ಸೀರಿಯಲ್‌ನಲ್ಲಿ ಅವಕಾಶ ಕೊಟ್ಟಿದ್ದೀನಿ, ಸಿನೆಮಾದಲ್ಲಿ ಅವಕಾಶ ಕೊಡುಸ್ತಾಯಿದ್ದೀನಿ... ಆಕೆಗೆ ನಾನೇ ಗಾಡ್ ಫಾದರ್, ಆಕೆ ನನಗೆ ಕೃತಜ್ಞತೆಯಿಂದ ಇರಬೇಕು' ಅನ್ನೋ ಭಾವ ದಿನೇಶನಿಗಿತ್ತು ಅಂತ'.

'ಅಮ್ಮು ಏನಾದರೂ ಪೊಲೀಸ್ ಕಂಪ್ಲೇಂಟ್ ಕೊಟ್ಟು, ಕೇಸ್ ಕೋರ್ಟಲ್ಲಿ ಪ್ರೂವ್ ಆಗಿದ್ದರೆ, ಅವನಿಗೆ ಸೆಕ್ಷನ್ 295ರಲ್ಲಿ, ಅಂದರೆ ತನ್ನ ಸ್ಥಾನಮಾನವನ್ನು ಉಪಯೋಗಿಸಿಕೊಂಡು ತನ್ನ ಕೆಳಗಿನವರಿಗೆ ಲೈಂಗಿಕ ಕಿರುಕುಳ ಕೊಡುವುದು, ಆರು ವರ್ಷ ಜೈಲು ಶಿಕ್ಷೆ ಗೊತ್ತೇನ್ರಿ. ಕೋರ್ಟ್ ಈ ನಡುವೆ ಈ ತರದ ಅಪರಾಧಗಳನ್ನ ಬಹಳ ಗಂಭೀರವಾಗಿ ತಗೊಳುತ್ತೆ. ಪ್ರಾಕ್ಟಿಕಲಿ ಹಿ ವಿಲ್ ಬಿ ಫಿನಿಷ್ಡ್. ಎನಿವೇ... ಎ ವೆರಿ ಇಂಪಾರ್ಟೆಂಟ್ ಪೀಸ್ ಆಫ್ ಡಾಕ್ಯುಮೆಂಟ್.. ಈಗ ಇದು ಬರೀ ಕಾಗದ ಅಲ್ಲ... ಎ ವೈಟಲ್ ಎವಿಡೆನ್ಸ್'.

'ವಿನಯ್ ಈಗ ಸದ್ಯಕ್ಕೆ, ತಾರಸಿಗೊಂದು ಕಾಫಿ ಕಳಿಸಿ'.

'ಯೆಸ್ ಸಾರ್...'

ಪ್ರತಿಯೊಂದು ಕೇಸು, ಹೊಸತು, ವಿಭಿನ್ನ, ಹಳೆಯ ಕೇಸುಗಳ ಅನುಭವವಷ್ಟೇ ಆಧಾರವಾದರೆ, ಅವು ನಮ್ಮನ್ನು ಪೂರ್ವ ನಿರ್ಧಾರಿತ ಹಾದಿಗೆ ದೂಡುವ ಸಾಧ್ಯತೆಗಳೇ ಹೆಚ್ಚು. ಆದ್ದರಿಂದ ಪ್ರತಿಯೊಂದು ಪ್ರಕರಣವನ್ನು ಯಾವುದೇ ಪೂರ್ವಗ್ರಹವಿಲ್ಲದೆ ಮುಕ್ತವಾಗಿ, ತೆರೆದ ಮನಸ್ಸಿನಿಂದ, ಅದರದರ ಅರ್ಹತೆ, ಅಗತ್ಯತೆಗಳ ಆಧಾರದ ಮೇಲೆ ಅವಲೋಕಿಸಬೇಕಾಗುತ್ತದೆ. ಇದೇ ಬಹುಶಃ ಅನುಭವವು ಕಲಿಸಬಹುದಾದ ದೊಡ್ಡ ಪಾಠ. ಈ ತಿಳಿವಿನ ಬೆಳಕೇ ಮಾಯಣ್ಣನಿಗೆ ಮಾರ್ಗದರ್ಶಿಯಾಗಿತ್ತು.

'ಸಾರ್, ಕಾಫಿ'.

ಕಾಫಿ ಲೋಟ ಹಿಡಿದು ನಿಂತಿದ್ದರು ಕಾನ್ಸ್‌ಟೆಬಲ್ ಕಾಟಯ್ಯ. ಕಾಫಿ ಲೋಟ ಕೈಗೆತ್ತಿಕೊಂಡು ಕುಡಿಯುತ್ತಾ—

'ಕಾಟಯ್ಯ, ಇನ್ನೂ ಎಷ್ಟು ವರ್ಷ ಸರ್ವೀಸ್ ಇದೆ ನಿಮಗೆ?'

'ಎರಡು ವರ್ಷ, ಅಷ್ಟೇ ಸಾರ್'.

'ಆಯ್ತು... ಹೇಳಿ, ಮನುಷ್ಯ ಯಾವಾಗ ಇನ್ನೊಬ್ಬ ಮನುಷ್ಯನಿಗೆ ಕೆಡುಕು ಅಥವಾ ಕೊಲೆ ಮಾಡ್ತಾನೆ?'

'ಅವಮಾನ, ಹೊಟ್ಟೆಕಿಚ್ಚು, ದ್ವೇಷ, ಮೋಸ, ಭಯ ಆಮೇಲೆ ದುರಾಸೆಯಿಂದ ಸಾರ್'.

'ಇದರೊಳಗೆ ಯಾವುದು ಜಾಸ್ತಿ ಸ್ಟ್ರಾಂಗು'.

'ಅದೇಳೋದು ಕಷ್ಟ ಸಾರ್... ಅದೆಷ್ಟರಮಟ್ಟಿಗೆ ಅನ್ನೋದರ್ಮೇಲೆ ಅಲ್ವಾ ಸಾರ್... ಅಂಗ್ ನೋಡೋಕೋದ್ರೆ ಭಯ ಫಸ್ಟೇನೋ... ಏನುಕ್ಕೆ ಅಂದ್ರೆ, ಯಾರಾನ ನಮ್ ಬುಡಕ್ಕೇ, ನಮ್ ಜೀವಕ್ಕೇ, ತರ್ತಾರೆ ಅಂದ್ರೆ, ಅವರನ್ನ ನಿವಾರುಸ್ಕೊಳದೇ ಅಲ್ವಾ ಸಾರ್ ನಾವು ಫಸ್ಟ್ ನೋಡೋದು?'

'ಸರಿ, ನೀವು ಹೋಗಿ'.

ದಿನದ ಮೊದಲನೇ ಕಾಫಿಯನ್ನು ಸವಿಯುತ್ತಾ ತಾರಸಿ ಸುತ್ತುತ್ತಿದ್ದಂತೆ ಮಾಯಣ್ಣನ ಹೆಂಡತಿ ಸೌಜನ್ಯಳ ಫೋನ್ ಕರೆಯುತ್ತಿತ್ತು.

'ರೀ ನಿಮ್ಗೊಂದ್ ಗೊತ್ತಾ...?'

'ಗೊತ್ತಿಲ್ಲ...'

'ಬ್ಯೂಟಿಪಾರ್ಲರ್ ಜ್ಯೋತಿ ಇಲ್ವಾ...'

'ನಂಗೇನ್ ಗೊತ್ತು... ಇಲ್ದಿದ್ರೆ ಎರಡು ದಿನ ಹುಡುಕಿ, ಆಮೇಲೆ ಒಂದು ಕಂಪ್ಲೇಂಟ್ ಕೊಡ್ಲೀ...'

'ಅಯ್ಯೋ ನಿಮ್ ತಲೆಗೆ ಒಳ್ಳೇದೇನು ಬರಂಗೇ ಇಲ್ವಾ?'

'ಹೋಗ್ಲಿ ಹೇಳು... ಅವರ ಗಂಡ ವರ್ಷದಿಂದೆ ಓಡೋಗಿದ್ನಲ್ಲಾ, ವಾಪಸ್ ಬಂದ್ನಾ?'

'ಬರಾಕ್ಕೆ ಮುಖ ಎಲ್ಲೈತೆ ಅವ್ನಿಗೆ?'

'ಅಂತದೇನ್ ಮಾಡ್ಕೊಂಡಿದ್ದ?'

'ಕೆಲ್ಸ ಕಾರ್ಯ ಒಂದೂ ಇಲ್ಲ. ಪಾರ್ಲರ್ ಬಾಗ್ಲಾಗೆ ಕಾಯ್ಕೊಂಡ್ ಬಿದ್ದಿರೂ ಅಂದ್ರೆ ಅವುಳ್ಯಾವೊಳೋ ವಾರುಕ್ಕೊಂದ್ಸಾರಿ ಬ್ಲೀಚಿಂಗ್‌ಗೆ ಬರೋವ್ಳಂತೆ... ಈ ಗಂಡೆತಿಮ್ಮ ಅವುಳ್ನ ಒಡ್ಕೊಂಡೋಗಿ ಆಗ್ಲೇ ಮದ್ವೇನೂ ಆಗವ್ನಂತೆ...'

'ಅಯ್ಯೋ ರಾಮ, ಜಗತ್ತಲ್ಲಿ ಏನೇನ್ ನಡಿಯುತ್ತೇ ನೋಡು.. ಮತ್ತೆ ಇವಾಗ ಬಾಗಿಲು ಕಾಯೋಕೆ ಯಾರುನ್ನಾಕವ್ರೇ ಅವರು?'

'ಪಾಪ, ಆವಮ್ಮನ್ ನೆವೆ ಅವುಳ್ಗೇ'.

'ಸರಿ ಈಗೇನು?'

'ಅದೇ... ಯೇಳ್ತಿದ್ನೂ ಪಾರ್ಲರ್ ಜ್ಯೋತಿ...'

'ಏನಂತಾ?'

'ಇಂಗೇ ಅಂತ ಗೊತ್ತಿದ್ರೆ, ಬ್ಲೀಚಿಂಗೆ ಬಂದಾಗ ಅವ್ಳ್ ಮುಕುಕ್ಕೆ ಆಸಿಡ್ ಆಕ್ಬುಡ್ತಿದ್ದೇ ಅಂತ. ಅದಿರಲೀ. ಇವಾಗ ವಿಷಯಕ್ಕೆ ಬರ್ತೀನಿ'.

'ವಾ... ನೀನಿನ್ನೂ ವಿಷಯಕ್ಕೇ ಬಂದಿಲ್ವಾ?'

'ಈಗ ಆ ಪಾರ್ಲರ್ ಜ್ಯೋತಿ, ಪಾರ್ಲರ್ ಪಕ್ಕದಲ್ಲೇ ಜಿಮ್ ಓಪನ್ ಮಾಡವ್ಳೆ'.

'ಹೌದೇನು?'

'ನನ್ ಡೀಪಿ ನೋಡುದ್ರಾ?'

'ನೋಡ್ದೇ'.

'ಪಾರ್ಲರ್ ಜ್ಯೋತಿ ಏನೇಳುದ್ಳು, ಗೊತ್ತಾ?'

'ಗೊತ್ತಿಲ್ಲ'.

'ನಾನು ಇನ್ನೊಂದ್ ಐದ್ ಸುತ್ತು ಕಡಿಮೆ ಆದ್ರೆ ಆ ಹಿಂದಿ ಆಕ್ಟ್ರೆಸ್ಸು ದೇವಿಕಾ ನಡುಕೋಣೆ ಇದ್ದಂಗಿರ್ತೀನಂತೆ'.

'ಅದುನ್ನ ನಾನೇಳಕೆ ಮುಂಚೆ ಆಯಮ್ಮನೇ ಹೇಳ್ಬುಟ್ರಾ?'

'ನೀವೂನೂ ಅದೇ ಯೇಳ್ಬೇಕು ಅಂತಿದ್ರಾ?'

'ಇನ್ನೇನ್ ಮತ್ತೆ...'

'ಅದುಕ್ಕೆ ಏರೋಬಿಕ್ ಸೇರ್ಕೊಳಿ ಅಂದ್ಳು ಆ